# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548 |
| 2 | ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 14-08-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಡಿ.ಎ. ಅಧೀನದ ಫ್ಲೈ ಓವರ್‌ಗಳ ಕೆಳಗೆ ಜಾಹೀರಾತು ಫಲಕಗಳನ್ನು ಅಳವಡಿಸಲು ಪಿ.ಪಿ.ಪಿ. ಯೋಜನೆಯಡಿ ಅನುಮತಿ ನೀಡಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ; ಈ ರೀತಿ ಅನುಮತಿ ನೀಡಿರುವುದರಿಂದ ಬಿ.ಬಿ.ಎಂ.ಪಿ.ಗೆ ಇಲ್ಲಿಯವರೆಗೆ ಬಂದಿರುವ ಆದಾಯವೆಷ್ಟು; | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪಿಪಿಪಿ (ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ) ಯೋಜನೆಯಡಿ ಹೆಬ್ಬಾಳ ಮೇಲುಸೇತುವೆ ಕೆಳಭಾಗದ ತೆರೆದ ಪ್ರದೇಶದಲ್ಲಿ ಲ್ಯಾಂಡ್ ಸ್ಕೇಪಿಂಗ್ ಅಭಿವೃದ್ಧಿ ಕಾಮಗಾರಿ, ಕರ್ಬ್ ಸ್ಟೋನ್ಸ್, ಮೀಡಿಯನ್ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಉದ್ಯಾನವನದ ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯವನ್ನು ಜಾಹೀರಾತು ಹಕ್ಕುಗಳ ಎದುರಿಗೆ ಟೆಂಡರ್ ಮೂಲಕ 30 ವರ್ಷಗಳ ಅವಧಿಗೆ ಅನುಮತಿಸಿರುವ ಸ್ಥಳಗಳಲ್ಲಿ ವಿವಿಧ ವಿನ್ಯಾಸದ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸಿ ಪ್ರದರ್ಶಿಸಲು ಅತಿ ಹೆಚ್ಚು ಆದಾಯ ನೀಡುವ ರಿಯಾಯಿತಿದಾರರಿಗೆ ಟೆಂಡರ್ ಮುಖಾಂತರ ನೀಡಲಾಗುತ್ತಿದೆ.<br>• ಬಿಬಿಎಂಪಿಗೆ ಇಲ್ಲಿಯವರೆಗೆ ರೂ.1,21,17,341/- ಗಳನ್ನು ಮಾತ್ರ ಪಾವತಿಸಲಾಗಿದೆ. |
| ಆ) | ಪಿ.ಪಿ.ಪಿ. ಯೋಜನೆ ಅಡಿ ಜಾಹೀರಾತು ಫಲಕಗಳನ್ನು ಅಳವಡಿಸಲು ದೀರ್ಘಾವಧಿಗೆ ಅನುಮತಿ ನೀಡಲು ಕಾರಣಗಳೇನು ಹಾಗೂ ದೀರ್ಘಾವಧಿಗೆ ಅನುಮತಿ ನೀಡಿರುವುದರಿಂದ ಬಿ.ಬಿ.ಎಂ.ಪಿ.ಗೆ ಆಗಿರುವ ಲಾಭಗಳೇನು; | • ಪಿ.ಪಿ.ಪಿ. ಮಾದರಿಯನ್ನು ಹೂಡಿಕೆ ಹಾಗೂ ಗಳಿಕೆಯನ್ನು ಸಮತೋಲನದಲ್ಲಿ ಇಡುವ ಉದ್ದೇಶದಿಂದ ಅಳವಡಿಸಿಕೊಳ್ಳಲಾಗಿರುತ್ತದೆ.<br>• ದೀರ್ಘಾವಧಿಗೆ ನೀಡುವುದರಿಂದ ಪಾಲಿಕೆಗೆ ನಿರ್ವಹಣೆ ವೆಚ್ಚ ಉಳಿತಾಯವಾಗುವುದಲ್ಲದೇ ನೆಲಬಾಡಿಗೆ ಹಾಗೂ ಇತರೆ ರೂಪದಲ್ಲಿ ಆದಾಯ ಗಳಿಕೆಯಾಗುತ್ತಿರುತ್ತದೆ.<br>• ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ ಖಾಸಗಿ ನಿಧಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ. |

| | | |
|---|---|---|
| ಇ) | ಬಿ.ಡಿ.ಎ. ಅಧೀನದ ಫ್ಲೈ ಓವರ್‌ಗಳ ಕೆಳಗೆ ಎಷ್ಟು ಕಡೆ ಅನುಮತಿ ಪಡೆದು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿದೆ; (ವಿವರ ಒದಗಿಸುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೆಬ್ಬಾಳ ಮೇಲುಸೇತುವೆಯ ಮೇಲೆ ಹಾಗೂ ಕೆಳಭಾಗದ ತೆರೆದ ಪ್ರದೇಶದಲ್ಲಿ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸಲಾಗಿದೆ. |
| ಈ) | ಕೆಲವು ಕಡೆ ಅನುಮತಿ ಪಡೆಯದೆ ಜಾಹೀರಾತು ಫಲಕಗಳನ್ನು ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ.<br>ಅನುಮತಿ ಪಡೆಯದೇ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಲು ಸೂಚಿಸಲಾಗಿದೆ. |

**ನಅಇ 398 ಎಂಎನ್‌ಯು 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ